**ದಿನಾಂಕಃ 16-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಪಾಟೀ ಸವಾಲುಃ** 1 ರಿಂದ 12 ನೇ ಪ್ರತಿವಾದಿ ಪರ ವಕೀಲರನ್ನು ಪದೇ-ಪದೇ ಕೂಗಿ ಕರೆಯಲಾಯಿತು, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 13 ರಿಂದ 20 ನೆ ಪ್ರತಿವಾದಿಗಳ ಪರ ಶ್ರೀ ಐ ಪಿ ಕೆ ವಕೀಲರಿಂದಃ**

1. ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ವಾದಿಯವರು ನನ್ನ ಅಜ್ಜಿಯ ಅಕ್ಕನ ಮಕ್ಕಳು ಆಗಿರುತ್ತಾರೆ. ಪ್ರತಿವಾದಿ 1 ರಿಂದ 12 ನೇದವರು ವಾದಿಯ ದಾವೆಗೆ ಪೂರಕವಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ 13 ರಿಂದ 20 ರವರು ಯಾವಾಗ ದಾವಾ ಆಸ್ತಿಯನ್ನು ಖರೀದಿಗೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ಅವರು ಖರೀದಿಗೆ ಪಡೆದಿಲ್ಲ ಎಂದು ಹೇಳುತ್ತಾರೆ. ದಿಃ 28-08-1996 ರಲ್ಲಿ 1 ರಿಂದ 12 ನೇ ಪ್ರತಿವಾದಿಯವರು ಹನುಮಂತಪ್ಪ ಮಾವಿನತೋಪರವರಿಗೆ ಖರೀದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಬ್ದುಲ್ ಮುತ್ತವಲ್ಲಿ ತಂದೆ ಅಬ್ದುಲ್ ಮಜೀದ್ ಸಾಬ್ ಹಲಗೇರಿಯವರು ನನ್ನ ತಾಯಿಯ ಅಕ್ಕನ ಗಂಡ ಆಗಿರುತ್ತಾರೆ. 11 ನೆ ಪ್ರತಿವಾದಿಯವರ ಪರಿಚಯ ಇರುತ್ತದೆ. ಮಹಮ್ಮದ್ ಇಲಿಯಾಸ್ ತಂದೆ ಅಬ್ದುಲ್ ಮಜೀದ್ ಸಾಬ್ ಹಲಗೇರಿ ಯವರ ಪರಿಚಯ ಇರುತ್ತದೆ.

2. ವಾದಿ ನಂಃ 1 , 3 ಹಾಗೂ ಪ್ರತಿವಾದಿ ನಂಃ 1, 11 ಮತ್ತು 12 ರವರು ಸೇರಿ ದಾವಾ ಆಸ್ತಿಯನ್ನು ಹನುಮಂತಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ನಂಃ 1, 2, 3, ಪ್ರತಿವಾದಿ ನಂಃ 4 ರವರು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ. ಸಾಕ್ಷಿಗೆ ಈಗ ದಿಃ 28-08-1996 ರ ಕ್ರಯ ಪತ್ರದ ಪ್ರತಿ ತೋರಿಸಿ ಅದರಲ್ಲಿರುವ ಸಹಿಗಳು ಸಕೀನಾ ಬಿ, ಅಮೀನಾ ಬಿ, ಆಸಿಯಾ ಬಿ ಮತ್ತು ಸಗೀದಾಬೀ ರವರದ್ದಾಗಿರುತ್ತದೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿರುವ ಸಹಿಗಳು ಅವರದ್ದೆ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಯರು ಮತ್ತು ಪ್ರತಿವಾದಿ 1 ರಿಂದ 12 ರವರು ಮಿಲಾಪೆಯಾಗಿ ಈ ಕೇಸ್ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಅವರಿಗೆ ಸಂಬಂಧಿಕನಾಗಿದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಯಾವತ್ತೂ ಖರೀದಿಗೆ ಕೊಟ್ಟಿರುವುದಿಲ್ಲ. ದಿಃ 28-08-1996 ರಂದು ವಾದಿ ನಂಃ 1, 2 ಹಾಗೂ ಪ್ರತಿವಾದಿ ನಂಃ 11 ಮತ್ತು 12 ರವರು ಸಬ್ ರಿಜಿಸ್ಟರ್ ಕಚೇರಿಯಲ್ಲಿ ನೋಂದಾಯಿತ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಬ್ ರಿಜಿಸ್ಟರ್ ಕಚೇರಿಯಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತನ್ನು ಸಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ

ಪತ್ರದಲ್ಲಿ 4 ನೇ ಪ್ಯಾರಾದಲ್ಲಿ ಸುಳ್ಳು ಮಜಕೂರುಗಳನ್ನು ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಣಗೆರೆಯಲ್ಲಿ ವಾಸವಾಗಿರುತ್ತೇನೆ. ನಾನು ಹುಟ್ಟಿದಾಗಿನಿಂದಲೂ ಅಲ್ಲಿಯೇ ವಾಸವಾಗಿರುತ್ತೇನೆ. ನಾನು ಹುಟ್ಟಿದಾಗಿನಿಂದಲೂ ದಾವಣಗೆರೆಯಲ್ಲಿ ವಾಸವಾಗಿದ್ದರಿಂದ ದಾವೆದ ಬಗ್ಗೆ ಏನು ಗೊತ್ತಿಲ್ಲದೆ ಇದ್ದರೂ ಸಹ ವಾದಿ ಮತ್ತು 1 ರಿಂದ 12 ನೆ ಪ್ರತಿವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರದ 5 ನೆ ಪ್ಯಾರಾದಲ್ಲಿ ಕಾಣಿಸಿರುವಂತೆ ಕೋರು ಉಳುಮೆ ಮಾಡುತ್ತಿದ್ದ ಬಗ್ಗೆ ಯಾವುದೆ ದಾಖಲೆಯನ್ನು ನಾನು ಹಾಜರು ಪಡಿಸಿರುವುದಿಲ್ಲ. ಯಾವುದೆ ದಾಖಲಾತಿ ಇಲ್ಲದೆ ಇದ್ದರೂ ಸಹ ಮಾನ್ಯ ನ್ಯಾಯಾಲಯಕ್ಕೆ ತಪ್ಪು ತಿಳುವಳಿಕೆ ಬರುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರದ 6 ನೆ ಪ್ಯಾರಾದಲ್ಲಿ ಸುಳ್ಳು ಮಜಕೂರುಗಳನ್ನು ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ಖರೀದಿ ಕೊಡುವ ಪೂರ್ವದಲ್ಲಿಯೂ ಖರೀದಿದಾರರೆ ಜಮೀನಿನ ಸ್ವಾಧೀನದಲ್ಲಿ ಇದ್ದು 1996 ರಲ್ಲಿ ಖರೀದಿ ಕೊಟ್ಟ ನಂತರವೂ ಸಹ ಅವರೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 7 ರಲ್ಲಿ ಕಾಣಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. 13 ರಿಂದ 20 ನೆ ಪ್ರತಿವಾದಿಗಳು ಆಸ್ತಿಯನ್ನು ಖರೀದಿಗೆ ಪಡೆದು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 13 ರಿಂದ 20 ನೆ ಪ್ರತಿವಾದಿಗಳು ಸುಳ್ಳು ಕ್ರಯ ಪತ್ರ ಮಾಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಕನ್ನಡದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ . ನನಗೆ ಉರ್ದು ಓದಲು ಬರೆಯಲು ಬರುವುದಿಲ್ಲ. ನನಗೆ ಉರ್ದು ಓದಲು ಬರೆಯಲು ಬರುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 7 ವರ್ಷಗಳ ಹಿಂದೆ ಈ ಕೇಸ್ ನ್ನು ಹಾಕಿರುತ್ತಾರೆ. ಅಬ್ದುಲ್ ಮುತ್ತವಲ್ಲಿ ರವರು ತೀರಿಕೊಂಡ ನಂತರ ಬಡತನದಿಂದ ಅವರ ಮಕ್ಕಳು ಬೇರೆ ಕಡೆಗೆ ಹೋಗಿದ್ದು, ಈ ವಿಚಾರ ಗೊತ್ತಾದ ನಂತರ ಈ ದಾವೆ ಹಾಕಿರುತ್ತಾರೆ. ವಾದಿಗಳು ಮತ್ತು ಪ್ರತಿವಾದಿ 1 ರಿಂದ 12 ರವರು ಕೆಲವರು ರಾಣೇಬೆನ್ನೂರು, ಕೆಲವರು ದಾವಣಗೆರೆ, ಕೆಲವರು ಧಾರವಾಡ ಹಾಗೂ ಗೋವಾದಲ್ಲಿ ವಾಸವಾಗಿರುತ್ತಾರೆ. ಖರೀದಿದಾರರಿಗೆ ತೊಂದರೆ ಕೊಡುವುದಕ್ಕಾಗಿ ಖೊಟ್ಟಿ ದಾವೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.